# ಸ್ತ್ರೀ ರೋಗಿಗಳಲ್ಲಿ ಪ್ಲಾಸ್ಟಿಕ್ ಸರ್ಜರಿ

**ಸಮಾಗಮ ಕ್ರಿಯೆಗೆ ಕಿರಿಕಿರಿಯುಂಟು ಮಾಡುವ ಸಮಸ್ಯೆಗಳನ್ನು ಪ್ಲಾಸ್ಟಿಕ್ ಸರ್ಜರಿ ಮುಖಾಂತರ ನಿವಾರಿಸಿಕೊಳ್ಳಬಹುದು.**

ಶಶಿಕಲಾಗೆ 26 ವರ್ಷ. ಮದುವೆಯಾಗಿ ಅನೇಕ ತಿಂಗಳು ಕಳೆದರೂ ಸಹಜ ಲೈಂಗಿಕ ಮಿಲನ ಸಾಧ್ಯವಾಗಿರಲಿಲ್ಲ. ಗಂಡ- ಹೆಂಡತಿ ವೈದ್ಯರ ಬಳಿ ಹೋಗಿ ಪರೀಕ್ಷೆಗೊಳಗಾದರು. ಶಶಿಕಲಾಗೆ ಸಣ್ಣದೊಂದು ಪ್ಲಾಸ್ಟಿಕ್ ಸರ್ಜರಿ ಮಾಡಿದರೆ ಸಮಸ್ಯೆಗೆ ಪರಿಹಾರ ಸಾಧ್ಯವೆಂದು ವೈದ್ಯರು ಹೇಳಿದರು. ಪ್ಲಾಸ್ಟಿಕ್ ಸರ್ಜರಿ ಮಾಡಿಸಿಕೊಂಡ 2-3 ತಿಂಗಳಿನಲ್ಲಿಯೇ ಆಕೆ ಹಾಗೂ ಪತಿಯ ಸಮಾಗಮ ಚಟುವಟಿಕೆ ಯಾವುದೇ ತೊಂದರೆ ಇಲ್ಲದೆ ಸಾಗಿತು.

ಲೈಂಗಿಕ ಚಟುವಟಿಕೆಗೆ ಅಡ್ಡಿಯುಂಟಾಗುವ ಮಹಿಳೆಯರ ಕೆಲವೊಂದು ಸಮಸ್ಯೆಗಳಿಗೆ ಪ್ಲಾಸ್ಟಿಕ್ ಸರ್ಜರಿ ವರದಾನ ಎಂಬಂತೆ ಪರಿಣಮಿಸಿದೆ.


**ಪ್ಲಾಸ್ಟಿಕ್ ಸರ್ಜರಿ ಉದ್ದೇಶ**

ಕೆಲವರಿಗೆ ಹುಟ್ಟಿದಾಗಿನಿಂದಲೇ ವೆಜೈನಲ್ ಭಾಗದಲ್ಲಿ ತೊಂದರೆ ಇರುತ್ತದೆ. ಮತ್ತೆ ಕೆಲವರಿಗೆ ಹೆರಿಗೆಯಾದ ಬಳಿಕ, ಇನ್ನೂ ಹಲವರಿಗೆ ವಯಸ್ಸಾದ ನಂತರ ವೆಜೈನಲ್ ಕ್ಷೇತ್ರದಲ್ಲಿ ಬದಲಾವಣೆಗಳಾಗುತ್ತವೆ. ಆ ಭಾಗವನ್ನು ಮತ್ತೆ ಮೊದಲಿನ ಸ್ಥಿತಿಗೆ ತರುವುದೇ ಪ್ಲಾಸ್ಟಿಕ್ ಸರ್ಜರಿಯ ಮುಖ್ಯ ಉದ್ದೇಶ.

**ಪ್ಲಾಸ್ಟಿಕ್ ಸರ್ಜರಿಯ ಪ್ರಕಾರಗಳು**

**ವೆಜೈನೊ ಪ್ಲಾಸ್ಟಿ:** ಇದು ವೆಜೈನಾದ ಭಾಗವನ್ನು ಪುನರ್ ರೂಪಿಸುವ ಶಸ್ತ್ರಚಿಕಿತ್ಸೆ. ಕೆಲವು ಹುಡುಗಿಯರಿಗೆ ಹುಟ್ಟಿನಿಂದಲೇ ವೆಜೈನಾ ಭಾಗ ಬೆಳವಣಿಗೆ ಹೊಂದಿರುವುದಿಲ್ಲ. ಈ ಕಾರಣದಿಂದ ಅವರಿಗೆ ವಯೋಸಹಜ ಮುಟ್ಟು ಉಂಟಾಗುವುದಿಲ್ಲ. ಮತ್ತೆ ಕೆಲವರಿಗೆ ಮುಟ್ಟು ಉಂಟಾಗುತ್ತಿದ್ದರೂ ಸ್ರಾವ ಹೊರಬರಲು ದಾರಿಯಿರುವುದಿಲ್ಲ. ಇಂತಹ ಸ್ಥಿತಿಯಲ್ಲಿ ಮದುವೆಯ ಬಳಿಕ ಲೈಂಗಿಕ ಚಟುವಟಿಕೆಯಲ್ಲಿ ತೊಡಗಿದರೆ ವಿಪರೀತ ನೋವು ಉಂಟಾಗುತ್ತದೆ. ಲ್ಯಾಪ್ರೋಸ್ಕೋಪಿ ವಿಧಾನದಲ್ಲಿ ವೆಜೈನಾ ಭಾಗದ ಅಡೆತಡೆ ನಿವಾರಿಸಲು ಈ ಶಸ್ತ್ರಚಿಕಿತ್ಸೆ ಕೈಗೊಳ್ಳಲಾಗುತ್ತದೆ. ಶಸ್ತ್ರಚಿಕಿತ್ಸೆಗೊಳಗಾದ ಒಂದೂವರೆ ತಿಂಗಳ ಬಳಿಕ ಸಮಾಗಮ ಚಟುವಟಿಕೆಯಲ್ಲಿ ತೊಡಗಬಹುದು.

**ಹೈಮೆನೊಪ್ಲಾಸ್ಟಿ:** ಇದಕ್ಕೆ 'ಕನ್ಯಾಪೊರೆ' ಚಿಕಿತ್ಸೆ ಎಂದು ಹೇಳಲಾಗುತ್ತದೆ. ಅಥ್ಲೀಟ್‌ಗಳು ಸತತ ಚಲನಶೀಲ ಜೀವನಶೈಲಿಯಿಂದ 'ಕನ್ಯಾಪೊರೆ'



ಹೊರಟು ಹೋಗಿರುತ್ತದೆ. ಮತ್ತೆ ಕೆಲವರಿಗೆ ವಿವಾಹದ ಬಳಿಕ ಬಿದ್ದು ಏಟಾಗಿರುತ್ತದೆ. ವಿಚ್ಛೇದನದ ಬಳಿಕ ಮರುಮದುವೆಯಾಗಲು ಇಚ್ಛಿಸುವವರು ಈ ತೆರನಾದ ಶಸ್ತ್ರಚಿಕಿತ್ಸೆ ಮಾಡಿಸಿಕೊಳ್ಳುತ್ತಾರೆ. ಕನ್ಯಾಪೊರೆಯನ್ನು ಪುನರ್ ಸೃಷ್ಟಿ ಮಾಡುವುದೇ ಈ ಶಸ್ತ್ರಚಿಕಿತ್ಸೆಯ ಉದ್ದೇಶ. ಶಸ್ತ್ರಚಿಕಿತ್ಸೆಯ ಒಂದೂವರೆ ತಿಂಗಳ ಬಳಿಕ ಸಮಾಗಮದಲ್ಲಿ ತೊಡಗಬಹುದು.

**ಫೆಂಟನ್ಸ್ ಆಪರೇಷನ್:** ಸಮಾಗಮ ಚಟುವಟಿಕೆಯಲ್ಲಿ ತೊಡಗಿದಾಗ ವೆಜೈನಾದಲ್ಲಿ ತೀವ್ರ ನೋವುಂಟಾಗುತ್ತಿದ್ದರೆ ಈ ಮೈನರ್ ಸರ್ಜರಿ ಕೈಗೊಳ್ಳಲಾಗುತ್ತದೆ. ಆ ಭಾಗವನ್ನು ಶಸ್ತ್ರಚಿಕಿತ್ಸೆಯ ಮುಖಾಂತರ ಶೇ.30-40ರಷ್ಟು ಹೆಚ್ಚಳ ಮಾಡಲಾಗುತ್ತದೆ. ಶಸ್ತ್ರಚಿಕಿತ್ಸೆಯ ಬಳಿಕ ಒಂದು ತಿಂಗಳ ಬಳಿಕವೇ ಸಮಾಗಮದಲ್ಲಿ ತೊಡಗಬೇಕು.

**ಪೆರಿನಿಯಲ್ ರಿಪೇರ್:** ಕ್ಲಿಷ್ಟಕರ ಹೆರಿಗೆಯಿಂದಾಗಿ ವೆಜೈನಾ ಭಾಗದ ಸ್ನಾಯುಗಳು ತಮ್ಮ ಶಕ್ತಿ ಕಳೆದುಕೊಂಡಿರುತ್ತವೆ. ಈ ಕಾರಣದಿಂದ ಮಲ-ಮೂತ್ರ ವಿಸರ್ಜನೆಗೆ ಹಾಗೂ ಸಮಾಗಮ ಕ್ರಿಯೆಗೂ ಸಮಸ್ಯೆಯುಂಟಾಗುತ್ತದೆ. ಈ ಸಮಸ್ಯೆಯನ್ನು ವೈದ್ಯರು ನಾಲ್ಕು ಭಾಗಗಳಲ್ಲಿ ವಿಂಗಡಿಸುತ್ತಾರೆ. ಒಂದು ಹಾಗೂ ಎರಡನೇ ಹಂತದ ಸಮಸ್ಯೆ ಇರುವವರಿಗೆ ಔಷಧಿ- ಮಾತ್ರೆಗಳ ಜೊತೆ 'ಪೆರಿನಿಯಲ್ ಎಕ್ಸರ್‌ಸೈಜ್' ಮಾಡಲು ಹೇಳುತ್ತಾರೆ.

ಸಡಿಲಾದ ಸ್ನಾಯುಗಳ ಸಮಸ್ಯೆಯಿಂದ ಬಳಲುತ್ತಿರುವವರು ಕೆಲವೇ ತಿಂಗಳಲ್ಲಿ ಮೂಲ ಸ್ಥಿತಿಗೆ ಬರುತ್ತಾರೆ. ಆದರೆ 3 ಹಾಗೂ 4ನೇ ಹಂತದ ಪೆರಿನಿಯಲ್ ಸಮಸ್ಯೆ ಇದ್ದಾಗ ವೈದ್ಯರು ಶಸ್ತ್ರಚಿಕಿತ್ಸೆಗೆ ಶಿಫಾರಸು ಮಾಡುತ್ತಾರೆ. ಹೆರಿಗೆಯಾದ ಬಳಿಕ 3 ತಿಂಗಳಿನಿಂದ 1 ವರ್ಷದ ತನಕ ಈ ಶಸ್ತ್ರಚಿಕಿತ್ಸೆ ಮಾಡಿಸಿಕೊಳ್ಳುವುದು ಸೂಕ್ತ.

**ಫಿಸ್ಟೊ ಸೀಲ್:** ಇದು ಸಾಮಾನ್ಯವಾಗಿ 40-45ರ ವಯೋಮಿತಿಯ ಸ್ತ್ರೀಯರಿಗೆ ಕಾಡುವ ಸಮಸ್ಯೆ. ಅಂಥವರಲ್ಲಿ ಮೂತ್ರ ಕೋಶ ಹಾಗೂ ಮಲಕೋಶ ಸ್ವಸ್ಥಾನದಿಂದ ಜಾರಿ ಬಿಡುತ್ತವೆ. ಈ ಕಾರಣದಿಂದ ಮಲ-ಮೂತ್ರ ವಿಸರ್ಜನೆಗೆ ತೊಂದರರೆಯಾಗುತ್ತದೆ. ಸುಗಮ ಸಮಾಗಮಕ್ಕೂ ಕಿರಿಕಿರಿಯಾಗುತ್ತದೆ. ಗಂಡ- ಹೆಂಡತಿಗೆ ಕಸಿವಿಸಿಯನ್ನುಂಟು ಮಾಡುವ ಈ ಶಸ್ತ್ರಚಿಕಿತ್ಸೆಯೇ ಸೂಕ್ತ ಉಪಾಯ. ಇದೊಂದು ಸಣ್ಣ ಪ್ರಮಾಣದ ಶಸ್ತ್ರಚಿಕಿತ್ಸೆ. ಮುಂಜಾನೆ ಬಂದು ಶಸ್ತ್ರಚಿಕಿತ್ಸೆ ಮಾಡಿಸಿಕೊಂಡು ಸಂಜೆ ಹೊತ್ತಿಗೆ ಮನೆಗೆ ತೆರಳಬಹುದು.

ಈ ಸಮಸ್ಯೆ ಕಾಡಬಾರದು ಎಂದರೆ ಗರ್ಭಧಾರಣೆ ಹಾಗೂ ಹೆರಿಗೆಯ ಬಳಿಕ ಸ್ನಾಯುಗಳ ಬಲವರ್ಧನೆಗಾಗಿ ವೈದ್ಯರು ಸೂಚಿಸಿದ ಕೆಲವೊಂದು ವ್ಯಾಯಾಮಗಳನ್ನು ಮಾಡಬೇಕಾಗುತ್ತದೆ. ಎರಡು ಮಗು ಬೇಕು ಅನ್ನುವವರು ಮಕ್ಕಳ ನಡುವೆ ಸಾಕಷ್ಟು ಅಂತರ ಇಡಬೇಕು.


ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:

**ALTIUS HOSPITAL Pvt.Ltd.**

ಹೈಟೆಕ್ ಲ್ಯಾಪ್ರೋಸ್ಕೋಪಿ & ಗೈನೊಕಾಲಜಿ ಹಾಸ್ಪಿಟಲ್

altiushospital@yahoo.com

No 511, Outer Ring Road, 4th Block, HBR Layout,
Bangalore - 560043, Ph : 8882799799

www.altiushospital.com





**Dr. B. Ramesh**

Medical Director, Gynaecology & Laparoscopic Surgery